# ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ನಿಯಮಗಳು, 1964

## ವಿಷಯಾನುಕ್ರಮಣಿಕೆ

**ನಿಯಮಗಳು:**


1. ಹೆಸರು
2. ಪ್ರಾರಂಭ
3. ಪರಿಭಾಷೆ
4. ಕಾರ್ಮಿಕ ಸಂಘಗಳು ಮತ್ತು ಕೆಲಸಗಾರರೊಂದಿಗೆ ಸಮಾಲೋಚಿಸುವ ರೀತಿ
5. ನಿಯೋಜಕನು ಪ್ರದರ್ಶಿಸಬೇಕಾದ ರಜಾದಿನಗಳ ವಿವರಣೆ ಪಟ್ಟಿ
6. 3ನೇ ಪ್ರಕರಣದ ಮೇರೆಗಿನ ವಿವಾದಗಳನ್ನು ತೀರ್ಮಾನಿಸುವುದು
7. ಇನ್‌ಸ್ಪೆಕ್ಟರ್‌ನಿಂದ ಅನುಮೋದನೆ
8. ಡಿಸೆಂಬರ್ 31ಕ್ಕೆ ಮುಂಚೆ ಪ್ರದರ್ಶಿಸಬೇಕಾದ ರಜಾದಿನಗಳ ವಿವರಣೆ ಪಟ್ಟಿ
9. ರಜಾ ದಿನಗಳಿಗೆ ಸಂದಾಯ ಮಾಡಬೇಕಾದ ಮಜೂರಿಗಳು
10. ಇನ್‌ಸ್ಪೆಕ್ಟರ್‌ರ ಕರ್ತವ್ಯಗಳು
11. ವಾ ರ್ಷಿಕ ವಿವರಪಟ್ಟಿಕೆಗಳು
12. ಹಾಜರಿಪಟ್ಟಿ
13. ದಂಡನೆಗಳು

ನಮೂನೆ-I
ನಮೂನೆ-II
ನಮೂನೆ-III    [xx ಬಿಟ್ಟುಬಿಡಲಾಗಿದೆ]
ನಮೂನೆ- IV
ನಮೂನೆ-V
ನಮೂನೆ-VI

**ಅಧಿಸೂಚನೆಗಳು**

# ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ನಿಯಮಗಳು, 1964

(ಅಧಿಸೂಚನೆ ಸಂಖ್ಯೆ ಎಲ್‌ಡಿ 31 ಬಿಡಬ್ಲ್ಯೂ 91 (ಪಿ) ದಿನಾಂಕ 17–1–1998ರ ಮೂಲಕ ತಿದ್ದುಪಡಿಯಾದಂತೆ)

**[1][ಅಧಿಸೂಚನೆ]**

**ಬೆಂಗಳೂರು, ದಿನಾಂಕ 23ನೇ ಜನವರಿ 1965**

1. ಅಧಿಸೂಚನೆ ಸಂಖ್ಯೆ ಎಚ್‌ಡಿ 198 ಟಿಎಂಟಿ 63 ದಿನಾಂಕ 23.1.1965 ಇದನ್ನು ಕರ್ನಾಟಕ ರಾಜ್ಯಪತ್ರ ದಿನಾಂಕ 4.2.1965 ರಲ್ಲಿ ಪ್ರಕಟಿಸಲಾಗಿದೆ.

**ಜಿಎಸ್‌ಆರ್ 373.–** ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಅಧಿನಿಯಮ, 1963, (ಕರ್ನಾಟಕ ಅಧಿನಿಯಮ 1963ರ 24)ರ 12ನೇ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ :–

**1. ಹೆಸರು.–** ಈ ನಿಯಮಗಳನ್ನು ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ನಿಯಮಗಳು, 1964 ಎಂದು ಕರೆಯತಕ್ಕದ್ದು.

**2. ಪ್ರಾರಂಭ.–** ಈ ನಿಯಮಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು.

**3. ಪರಿಭಾಷೆಗಳು.–** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧಿನಿಯಮ" ಎಂದರೆ ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳು) ಅಧಿನಿಯಮ, 1963;

(ಬಿ) "ನಮೂನೆ ಎಂದರೆ ಈ ನಿಯಮಗಳಿಗೆ ಲಗತ್ತಿಸಿದ ನಮೂನೆ;

(ಸಿ) "ಪ್ರಕರಣ" ಎಂದರೆ ಈ ಅಧಿನಿಯಮದ ಒಂದು ಪ್ರಕರಣ"

(ಡಿ) ಇದರಲ್ಲಿ ಬಳಸಿದ ಮತ್ತು ಪರಿಭಾಷಿಸಿಲ್ಲದ ಎಲ್ಲಾ ಇತರ ಪದಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಅನುಕ್ರಮವಾಗಿ ಅವುಗಳಿಗೆ ಕೊಟ್ಟಿರುವ ಅರ್ಥವನ್ನು ಹೊಂದಿರತಕ್ಕದ್ದು.

[1][**4. ಕಾರ್ಮಿಕ ಸಂಘಗಳು ಮತ್ತು ಕೆಲಸಗಾರರೊಂದಿಗೆ ಸಮಾಲೋಚಿಸುವ ರೀತಿ.–** (1) ನಿಯೋಜಕನು 3ನೇ ಪ್ರಕರಣದ ಉದ್ದೇಶಕ್ಕಾಗಿ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ರಜಾದಿನಗಳ ಪಟ್ಟಿಯಿಂದ, ರಜಾದಿನಗಳ ಒಂದು ತಾತ್ಕಾಲಿಕ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಕಾರ್ಮಿಕ ಸಂಘಗಳಿಗೆ ಅಥವಾ ಯಾವುದೇ ಕಾರ್ಮಿಕ ಸಂಘ ಇಲ್ಲದಿದ್ದರೆ, ಉದ್ಯೋಗಿಗಳಿಗೆ ಅಥವಾ ಅವರ ಅಧಿಕೃತ ಪ್ರತಿನಿಧಿಗಳಿಗೆ, ಅದನ್ನು ಕಳುಹಿಸಿ ಅದು ಸ್ವೀಕೃತವಾದ ಹದಿನೈದು ದಿನಗಳೊಳಗಾಗಿ, ಅದಕ್ಕೆ ಸಂಬಂಧಪಟ್ಟಂತೆ ಅವರ ಆಕ್ಷೇಪಣೆಗಳು, ಸೂಚನೆಗಳು ಮತ್ತು ಸಲಹೆಗಳು ಏನಾದರೂ ಇದ್ದರೆ ಅದನ್ನು ಸಲ್ಲಿಸುವಂತೆ ತಿಳಿಸತಕ್ಕದ್ದು.

(2) (1)ನೇ ಉಪನಿಯಮದ ಮೇರೆಗೆ ತಿಳಿಸಿದ ಕಾಲಾವಧಿಯ ಒಳಗೆ ಆಕ್ಷೇಪಣೆಗಳನ್ನು ಅಥವಾ ಸಲಹೆಗಳನ್ನು ಸಲ್ಲಿಸದಿದ್ದರೆ ಅಥವಾ ಕಾರ್ಮಿಕ ಸಂಘಗಳು ಅಥವಾ ಯಾವುದೇ ಕಾರ್ಮಿಕ ಸಂಘವು ಇಲ್ಲದಿದ್ದರೆ ಉದ್ಯೋಗಿಗಳು ಅಥವಾ ಅವರ ಪ್ರತಿನಿಧಿಗಳು ಆ ತಾತ್ಕಾಲಿಕ ಪಟ್ಟಿಗೆ ಒಪ್ಪಿಗೆ ನೀಡಿದರೆ ನಿಯೋಜಕನು, 5ನೇ ನಿಯಮದ (1)ನೇ ಉಪನಿಯಮದ ಅನುಸಾರವಾಗಿ ಅದನ್ನು ಪ್ರದರ್ಶಿಸುವ ಮೂಲಕ ನಿರ್ದಿಷ್ಟಪಡಿಸುವುದಕ್ಕೆ ಕ್ರಮಕೈಗೊಳ್ಳತಕ್ಕದ್ದು, ಅದಕ್ಕೆ ಅಸಮ್ಮತಿ ಏನಾದರೂ ಇದ್ದಲ್ಲಿ 2ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ಅವನು ಕ್ರಮ ಕೈಗೊಳ್ಳತಕ್ಕದ್ದು.

**5. ನಿಯೋಜಕನು ಪ್ರದರ್ಶಿಸಬೇಕಾದ ರಜಾದಿನಗಳ ವಿವರಣೆ ಪಟ್ಟಿ.–** (1) ರಾಜ್ಯ ಪತ್ರದಲ್ಲಿ ಈ ನಿಯಮಗಳನ್ನು ಪ್ರಕಟಿಸಿದ ದಿನಾಂಕದಿಂದ, ಆ ದಿನಾಂಕದಂದು ಕೈಗಾರಿಕಾ ಸಂಸ್ಥೆಗಳು ಅಸ್ತಿತ್ವದಲ್ಲಿದ್ದರೆ, ಮೂವತ್ತು ದಿನಗಳ ಒಳಗಾಗಿ ಮತ್ತು ಹೊಸ ಕೈಗಾರಿಕಾ ಸಂಸ್ಥೆಗಳಾದರೆ ಅದು ಕೆಲಸವನ್ನು ಪ್ರಾರಂಭಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ, ಕೈಗಾರಿಕಾ ಸಂಸ್ಥೆಯ ನಿಯೋಜಕನು, 4ನೇ ನಿಯಮದ ಮೇರೆಗೆ ಸಮಾಲೋಚಿಸಿದ ತರುವಾಯ, 3ನೇ ಪ್ರಕರಣದ ಮೇರೆಗೆ ಅನುಮತಿಸಿದ ಮತ್ತು ಕ್ಯಾಲೆಂಡರ್ ವರ್ಷದಲ್ಲಿ ಆ ರಜಾದಿನಗಳು ವೇತನದ ರಜಾದಿನಗಳೆಂದು ಘೋಷಿಸಿದ ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳ ಪಟ್ಟಿಯನ್ನು ನೋಟೀಸು ಬೋರ್ಡಿನ ಮೇಲೆ ಮತ್ತು ಸಂಸ್ಥೆಯಲ್ಲಿನ ಯಾವುದೇ ಇತರ ಎದ್ದುಕಾಣುವ ಸ್ಥಳದಲ್ಲಿ, ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಸಂಬಂಧಪಟ್ಟ ನೌಕರರ ಮಾಹಿತಿಗಾಗಿ ಪ್ರದರ್ಶಿಸತಕ್ಕದ್ದು:

ಪರಂತು, ಪ್ರತಿ ತರುವಾಯದ ಕ್ಯಾಲೆಂಡರ್ ವರ್ಷಕ್ಕಾಗಿ ರಜಾದಿನಗಳನ್ನು ಘೋಷಿಸಬೇಕಾದ ಸಂದರ್ಭದಲ್ಲಿ ಅಂಥ ಘೋಷಣೆಯನ್ನು ಪ್ರತಿವರ್ಷ 31ನೇ ಡಿಸೆಂಬರ್‌ಗೆ ಮುಂಚಿತವಾಗಿ ಒಂದು ಎದ್ದುಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

**6. 3ನೇ ಪ್ರಕರಣದ ಮೇರೆಗಿನ ವಿವಾದಗಳನ್ನು ತೀರ್ಮಾನಿಸುವುದು.–** (1) 3ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ತೀರ್ಮಾನಕ್ಕಾಗಿ ಒಪ್ಪಿಸಿದ ವಿವಾದವನ್ನು ಇನ್‌ಸ್ಪೆಕ್ಟರನು ಸ್ವೀಕರಿಸಿದ ತರುವಾಯ ಸಾಧ್ಯವಾಗಬಹುದಾದಷ್ಟು ಬೇಗನೆ, ವಿವಾದದ ಕುರಿತಂತೆ ತಮ್ಮ ಆಕ್ಷೇಪಣೆಗಳನ್ನು ಅಥವಾ ಸಲಹೆಗಳನ್ನು ಅಥವಾ ಅಭಿಪ್ರಾಯಗಳನ್ನು ಸಲ್ಲಿಸುವುದಕ್ಕೆ ಅವನು ನಿಯೋಜಕನಿಗೆ ಮತ್ತು ಉದ್ಯೋಗಿಗಳಿಗೆ ಅಥವಾ ಅವರ ನೋಂದಾಯಿತ ಕಾರ್ಮಿಕ ಸಂಘಕ್ಕೆ ಯುಕ್ತ ಅವಕಾಶವನ್ನು ಅವನು ನೀಡಿದ ತರುವಾಯ ಮತ್ತು ಸಂದರ್ಭಾನುಸಾರ, ಅವರ ಆಕ್ಷೇಪಣೆಗಳನ್ನು ಸಲಹೆಗಳನ್ನು ಅಥವಾ ಅಭಿಪ್ರಾಯಗಳನ್ನು ಪರಿಶೀಲಿಸಿದ ತರುವಾಯ, ವಿವಾದವನ್ನು ತೀರ್ಮಾನಿಸತಕ್ಕದ್ದು.

(2) ಇನ್‌ಸ್ಪೆಕ್ಟರನು, ತೀರ್ಮಾನವನ್ನು ತೆಗೆದುಕೊಂಡ ದಿನಾಂಕದಿಂದ ಐದುದಿವಸಗಳೊಳಗಾಗಿ, ಸಂದರ್ಭಾನುಸಾರ ನಿಯೋಜಕನಿಗೆ ಮತ್ತು ಉದ್ಯೋಗಿಗಳಿಗೆ ಅಥವಾ ಸಂಬಂಧಪಟ್ಟ ಕಾರ್ಮಿಕ ಸಂಘಕ್ಕೆ ತನ್ನ ಲಿಖಿತ ತೀರ್ಮಾನವನ್ನು ತಿಳಿಸತಕ್ಕದ್ದು ಮತ್ತು ನಿಯೋಜಕನು ಆ ತರುವಾಯ, 5ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಆ ಕೂಡಲೇ ಅಂಥ ತೀರ್ಮಾನವನ್ನು ಪ್ರದರ್ಶಿಸತಕ್ಕದ್ದು.][1]

1. ಕರ್ನಾಟಕ ರಾಜ್ಯಪತ್ರ ಭಾಗ –ತ–2ಸಿ (i) (ವಿಶೇಷ) ಸಂಖ್ಯೆ 162 ದಿನಾಂಕ 4.2.1998 ರಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ 4ನೇ, 5ನೇ ಮತ್ತು 6ನೇ ನಿಯಮಗಳನ್ನು ಪ್ರತಿಯೋಜಿಸಲಾಗಿದೆ.

[1][**7. ಇನ್‌ಸ್ಪೆಕ್ಟರ್‌ನಿಂದ ಅನುಮೋದನೆ.–** [XXX]

**8. ಡಿಸೆಂಬರ್‌ನಿಂದ 31ಕ್ಕೆ ಮುಂಚೆ ಪ್ರದರ್ಶಿಸಬೇಕಾದ ರಜಾದಿನಗಳ ವಿವರಣೆ ಪಟ್ಟಿ.–** [XXX][1]

1. ಕರ್ನಾಟಕ ರಾಜ್ಯಪತ್ರ ಭಾಗ –iv–2ಸಿ (i) (ವಿಶೇಷ) ಸಂಖ್ಯೆ 162 ದಿನಾಂಕ 4.2.1998 ರಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ಬಿಟ್ಟುಬಿಡಲಾಗಿದೆ.

**9. ರಜಾ ದಿನಗಳಿಗೆ ಸಂದಾಯ ಮಾಡಬೇಕಾದ ಮಜೂರಿಗಳು:–** 5ನೇ ಪ್ರಕರಣದ (3)ನೇ ಉಪ–ಪ್ರಕರಣದ (೧)ನೇ ಖಂಡದ ಉದ್ದೇಶಕ್ಕಾಗಿ ಉದ್ಯೋಗಿಯ ದೈನಂದಿನ ಸರಾಸರಿ ಮಜೂರಿಯನ್ನು, 3ನೇ ಪ್ರಕರಣದ ಮೇರೆಗೆ ಮಂಜೂರು ಮಾಡಿದ ರಜಾದಿನಕ್ಕೆ ನಿಕಟಪೂರ್ವದಲ್ಲಿ ಮೂವತ್ತು ದಿವಸಗಳ ಅವಧಿಯಲ್ಲಿ ಆ ಕೈಗಾರಿಕಾ ಸಂಸ್ಥೆಯಲ್ಲಿ ಅವನು ಕೆಲಸ ಮಾಡಿರುವಂಥ ದಿನಗಳಿಗಾಗಿ ಅವನ ಒಟ್ಟು ಪೂರ್ಣಕಾಲಿಕ ಮಜೂರಿಗಳ ದೈನಂದಿನ ಸರಾಸರಿಗೆ ಸಮನಾದ ದರದಲ್ಲಿ ಲೆಕ್ಕ ಹಾಕತಕ್ಕದ್ದು.

[1][10. **ಇನ್‌ಸ್ಪೆಕ್ಟರ್‌ರ ಕರ್ತವ್ಯಗಳು.–** ಇನ್‌ಸ್ಪೆಕ್ಟರ್‌ನು ಕೈಗಾರಿಕಾ ಸಂಸ್ಥೆಯನ್ನು ಪರಿಶೀಲನೆ ಮಾಡಿದ ಪ್ರತಿ ಬಾರಿಯೂ,–

(ಎ) 4ನೇ ನಿಯಮದ (1)ನೇ ಉಪನಿಯಮದ ಮೇರೆಗೆ ರಜಾದಿನಗಳ ವಿವರಣೆಪಟ್ಟಿಯನ್ನು ಪ್ರದರ್ಶಿಸಲಾಗಿದೆಯೆಂದು;

(ಬಿ) ರಜಾದಿನದ ಮಜೂರಿ ಮೊಬಲಗನ್ನು ಸಂದಾಯ ಮಾಡಲಾಗಿದೆಯೆಂದು ಅವನು ಸ್ವತಃ ಮನದಟ್ಟುಮಾಡಿಕೊಳ್ಳತಕ್ಕದ್ದು.][1]

1. ಕರ್ನಾಟಕ ರಾಜ್ಯಪತ್ರ ಭಾಗ –iv–2ಸಿ (i) (ವಿಶೇಷ) ಸಂಖ್ಯೆ 162 ದಿನಾಂಕ 4.2.1998 ರಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ 10ನೇ ನಿಯಮವನ್ನು ಪ್ರತಿಯೋಜಿಸಲಾಗಿದೆ.

[1][**11. ವಾರ್ಷಿಕ ವಿವರ ಪಟ್ಟಿಕೆಗಳು.–** [XXX]

**12. ಹಾಜರಿ ಪಟ್ಟಿ.–** [XXX][1]

1. ಕರ್ನಾಟಕ ರಾಜ್ಯಪತ್ರ ಭಾಗ –iv–2ಸಿ (i) (ವಿಶೇಷ) ಸಂಖ್ಯೆ 162 ದಿನಾಂಕ 4.2.1998 ರಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ಬಿಟ್ಟುಬಿಡಲಾಗಿದೆ.

**13. ದಂಡನೆಗಳು.–** [1][ಈ ನಿಯಮಗಳ][1] ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1. ಕರ್ನಾಟಕ ರಾಜ್ಯಪತ್ರ ಭಾಗ -iv-2ಸಿ (i) (ವಿಶೇಷ) ಸಂಖ್ಯೆ 162 ದಿನಾಂಕ 4.2.1998 ರಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ಪ್ರತಿಯೋಜಿಸಲಾಗಿದೆ.

[1][ನಮೂನೆ I ರಿಂದ VI XXX][1]

1. ಕರ್ನಾಟಕ ರಾಜ್ಯಪತ್ರ ಭಾಗ -iv-2ಸಿ (i) (ವಿಶೇಷ) ಸಂಖ್ಯೆ 162 ದಿನಾಂಕ 4.2.1998 ರಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ಬಿಟ್ಟುಬಿಡಲಾಗಿದೆ.

The above translation of the Karnataka Industrial Establishments (National and Festival Holidays) Act, 1963 (Karnataka Act 24 of 1963) and Karnataka Industrial Establishments (National and Festival Holidays) Rules, 1964 shall be authioriative text in the Kannada Language under section 5A of the Karnataka Official Language Act, 1963 (Karnataka Act No. 26 of 1963).

GOVERNER OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಜಿ.ಕೆ. ಬೋರೇಗೌಡ**

ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.